<u>ದಿನಾಂಕಃ 23-01-2026 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>ಪಾಟೀ ಸವಾಲುಃ ಫಿರ್ಯಾದುದಾರರ ಪರ ಶ್ರೀಮತಿ. ಟಿ. ಕೆ. ಆರ್. ವಕೀಲರಿಂದ</u>

1. 2024 ನೇ ಇಸವಿಯಲ್ಲಿ ಸುರೇಶ್ ಎಂಬುವವರೂ ಸಹ ನನ್ನ ವಿರುದ್ಧ ಚೆಕ್ಕಿಗೆ ಸಂಬಂಧಿಸಿದಂತೆ ಇದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸದರಿ ಪರಕರಣದ ಸಿ.ಸಿ. ಸಂಖ್ಯೆ 441/2024 ಇರುತ್ತದೆ ಎಂದರೆ ಸರಿ. ನಿಡಿ.2 ರ ಬಾಡಿಗೆ ಕರಾರು ಪತ್ರ ಉಲ್ಫತ್ ಅಲಿ ಖಾನ್ ಹಾಗೂ ನನ್ನ ತಂದೆಯ ನಡುವೆ ಆಗಿದ್ದು ನನಗೂ ಅದಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹಾಗೂ ನನ್ನ ತಂದೆ ಒಟ್ಟಿಗೆ ವಾಸವಿದ್ದೇವೆ ಎಂದು ನುಡಿಯುತ್ತಾರೆ. ನಾನು ಮಾಡಿದ ಸಾಲವನ್ನು ಮರುಪಾವತಿ ಮಾಡುವ ಉದ್ದೇಶದಿಂದ ನನ್ನ ತಂದೆ ನಿಡಿ.3 ರಂತೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

2. ದಿನಾಂಕಃ 05-02-2016 ರಂದು ನಾನು ಸತೀಶ್ ರವರಿಂದ 2 ಲಕ್ಷ ರೂಪಾಯಿಗಳ ಸಾಲ ಪಡೆದಿದ್ದೆನು ಮತ್ತು ಅದನ್ನು 2018 ನೇ ಇಸವಿಯಲ್ಲಿ ಮರುಪಾವತಿ ಮಾಡಿದ್ದೆನು ಎಂದು ತೋರಿಸುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನಾನು ಸದರಿ ಸತೀಶ್ ರವರ ಸಾಲ ಮರುಪಾವತಿ ಮಾಡಿದ ನಂತರ ಅವರಿಗೆ ನಾನು ನೀಡಿದ ಚೆಕ್ಕುಗಳನ್ನು ವಾಪಸ್ಸು ಕೊಡುವಂತೆ ಕೇಳಿದ್ದು ಅವರು ಅದನ್ನು ವಾಪಸ್ಸು ನೀಡಿರಲಿಲ್ಲ ಎಂದು ಹೇಳಿದ್ದು ಆ ರೀತಿ ಅವರು ಚೆಕ್ಕುಗಳನ್ನು ವಾಪಸ್ಸು ನೀಡುವಂತೆ ಕೋರಿ ನಾನು ಅವರಿಗೆ ಯಾವುದೇ ನೋಟೀಸು ನೀಡಿರಲಿಲ್ಲ. ಅದರಂತೆ ನಾನು ಆ ಬಗ್ಗೆ ಪೋಲಿಸರಿಗೂ ಸಹ ದೂರು ನೀಡಿರಲಿಲ್ಲ.

3. ಫಿರ್ಯಾದುದಾರರು ನನಗೆ ತುಂಬಾ ಚೆನ್ನಾಗಿ ಪರಿಚಯ ಇರುತ್ತಾರೆ ಎಂದರೆ ಸರಿಯಲ್ಲ. ಕೈ ಸಾಲವನ್ನು ತೀರಿಸಲು ಹಾಗೂ ಕಾಳು ವ್ಯಾಪಾರಕ್ಕೆ ಸಂಬಂಧಿಸಿದಂತೆ ನಾನು ಫಿರ್ಯಾದುದಾರರಾದ ಸಂದೀಪ್ ರವರಿಂದ 15 ಲಕ್ಷ

ರೂಪಾಯಿಗಳ ಸಾಲ ಪಡೆದಿದ್ದೇನು ಎಂದರೆ ಸರಿಯಲ್ಲ. ಅವರಿಂದ ಪಡೆದ ಹಣವನ್ನು ಮರುಪಾವತಿ ಮಾಡುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಫಿರ್ಯಾದುದಾರರು ನನಗೆ ಪರಿಚಯ ಇರುವುದಿಲ್ಲ ಮತ್ತು ನಾನು ಅವರಿಂದ ಯಾವುದೇ ಹಣ ಪಡೆದಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವ ಸತೀಶ್ ಫಿರ್ಯಾದುದಾರರಿಗೆ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.4 ನ್ನು ನಾನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಸಹ ನಾನು ಕಾಳು ವ್ಯಾಪಾರ ಮಾಡಿಕೊಂಡಿದ್ದು ಕೂಲಿ ಕೆಲಸ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಾಗಮಂಗಲ.